# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-1360/2015/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 25/3/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

ವಿಷಯ: ಶ್ರೀಮತಿ.ರೇಷ್ಮಹಾನಗಲ್, ತಹಶೀಲ್ದಾರ್, ಹೊನ್ನಾಳಿ ತಾಲ್ಲೂಕು, ಮತ್ತು (2) ಶ್ರೀ.ಕೆ.ಎಸ್.ಸುಧೀರ್, ಗ್ರಾಮ ಲೆಕ್ಕಾಧಿಕಾರಿ, ಜೀನಹಳ್ಳಿ ವೃತ್ತ (ದಾನಿಹಳ್ಳಿ ವೃತ್ತ ಪ್ರಭಾರ), ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ, ಇವರು ಕರ್ತವ್ಯಲೋಪ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

******

1) ಶ್ರೀ.ಲೋಕೇಶ್ವರಪ್ಪ ಕೆ, ನ್ಯಾಮತಿ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು (1) ಶ್ರೀಮತಿ.ರೇಷ್ಮಹಾನಗಲ್, ತಹಶೀಲ್ದಾರ್, ಹೊನ್ನಾಳಿ ತಾಲ್ಲೂಕು, ಮತ್ತು (2) ಶ್ರೀ.ಕೆ.ಎಸ್.ಸುಧೀರ್, ಗ್ರಾಮ ಲೆಕ್ಕಾಧಿಕಾರಿ, ಜೀನಹಳ್ಳಿ ವೃತ್ತ (ದಾನಿಹಳ್ಳಿ ವೃತ್ತ ಪ್ರಭಾರ), ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ಈ ಪ್ರಕರಣದಲ್ಲಿ ಹೊನ್ನಾಳಿ ತಾಲ್ಲೂಕು ನ್ಯಾಮತಿ ಗ್ರಾಮದ ಸ.ನಂ.25 ರಲ್ಲಿ 1 ಎಕರೆ 30 ಗುಂಟೆ ವಿಸ್ತೀರ್ಣದ ಗೇಣಿ ಜಮೀನನ್ನು ಭೂನ್ಯಾಯ ಮಂಡಳಿಯು ದೂರುದಾರರಿಗೆ ಮಂಜೂರು ಮಾಡಿ ಹಕ್ಕುಪತ್ರ ನೀಡಿರುತ್ತದೆ. ಹಕ್ಕುಪತ್ರದ ಆಧಾರದಲ್ಲಿ ಎಂ.ಆರ್.6/80-81 ರಂತೆ ದಿ.7/8/1980 ರಂದು ಮ್ಯುಟೇಷನ್ ಆದೇಶ ಮಾಡಿರುತ್ತಾರೆ. ಸದರಿ ಮ್ಯುಟೇಷನ್ ಆಧಾರದಲ್ಲಿ ದೂರುದಾರರ ಹೆಸರನ್ನು ಪಹಣಿಯಲ್ಲಿ ಇಂಡೀಕರಿಸಿರುವುದಿಲ್ಲ. ಹಿಂದಿನ ಖಾತೆದಾರರ ಹೆಸರೇ ಪಹಣಿಯಲ್ಲಿ ನಮೂದಾಗಿರುತ್ತದೆ. ಆದ್ದರಿಂದ, ದೂರುದಾರರ ಹೆಸರನ್ನು ಪಹಣಿಯಲ್ಲಿ ಇಂಡೀಕರಿಸಲು ಅರ್ಜಿ ಸಲ್ಲಿಸಿದ್ದು, ಎದುರುದಾರರು ಯಾವುದೇ ಕ್ರಮವನ್ನು ಕೈಗೊಂಡಿಲ್ಲವೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3) ದೂರುದಾರರ ದೂರಿನ ಮೇಲೆ 1ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಹೊನ್ನಾಳಿ ತಾಲ್ಲೂಕು, ನ್ಯಾಮತಿ ಗ್ರಾಮದ ರಿ.ಸನಂ.25 ರ 1.30 ಗುಂಟೆ ಜಮೀನು ಮೂಲತಃ ಪಟೇಲ್ ಉಂಬಳಿ ಜಮೀನಾಗಿದ್ದು, ಕರ್ನಾಟಕ ಗ್ರಾಮಾಧಿಕಾರಿಗಳ ಇನಾಂ ರದ್ದತಿ ಕಾಯಿದೆಯಡಿ ಪ್ರಕರಣ ನಡೆದಿದ್ದು, ಶ್ರೀ.ಪಾಂಡುರಂಗರಾವ್ ಇವರಿಗೆ ಮರು ಮಂಜೂರಾತಿಯಾಗಿರುತ್ತದೆ. ನಂತರ ಭೂಸುಧಾರಣೆ ಕಾಯಿದೆಯಡಿ ಪ್ರಕರಣ

ನಡೆದಿದ್ದು, ಫಾರಂ ನಂ.7 ಗೇಣಿ ಅರ್ಜಿಯನ್ನು ಪರಿಗಣಿಸಿ ಕೆ.ಲೋಕೇಶ್ವರಪ್ಪ ಬಿನ್ ದೊಡ್ಡ ಈಶ್ವರಪ್ಪ ಇವರಿಗೆ ಫಾರಂ ನಂ.10 ಹಕ್ಕುಪತ್ರ ನೀಡಲಾಗಿರುತ್ತದೆ. ಮಾನ್ಯ ಉಪ ವಿಭಾಗಾಧಿಕಾರಿಗಳು. ದಾವಣಗೆರೆ ಇವರ ಕಾರ್ಯಾಲಯ ಪತ್ರ ಸಂ.ಆರ್‌ಆರ್‌ಟಿ ಸಿಆರ್.413/14-15 ದಿ.13/11/14 ರನ್ವಯ ಲೋಕೇಶ್ವರಪ್ಪ ಕೆ ಇವರ ಮಗನಾದ ಶ್ರೀ.ಜಯಪ್ಪ ಇವರ ಹೆಸರಿಗೆ ಭೂ ನ್ಯಾಯ ಮಂಡಳಿಯ ಆದೇಶದಂತೆ ಹಕ್ಕು ಬದಲಾವಣೆ ಮಾಡಲು ಕೋರಿದ್ದು, ಸದರಿ ಪ್ರಕರಣ ವಿ.ಓ.ಎ.ಸಿ. ಪ್ರಕರಣವಡಿ ಹಾಲಿ ಖಾತೆದಾರರಾದ ಶ್ರೀ.ಪಾಂಡುರಂಗರಾವ್ ಬಿನ್ ವೆಂಕೋಬರಾವ್ ಇವರ ಹೆಸರಿಗೆ ಹಕ್ಕು ದಾಖಲಿಸಲು ಆದೇಶವಾಗಿರುವುದರಿಂದ, ಪ್ರಸ್ತುತ ಪ್ರಕರಣದಲ್ಲಿ ಯಾವ ಆದೇಶದ ಪ್ರಕಾರ ಕ್ರಮ ವಹಿಸಬೇಕು ಎಂಬ ಬಗ್ಗೆ ಹೊನ್ನಾಳಿ ತಹಶೀಲ್ದಾರ್ ಕಾರ್ಯಾಲಯದಿಂದ ನಿರ್ದೇಶನ ಕೋರಲಾಗಿದ್ದು, ಮಾನ್ಯ ಉಪ ವಿಭಾಗಾಧಿಕಾರಿಗಳು, ದಾವಣಗೆರೆ ಇವರು ಅರ್ಜಿದಾರರ ತಕರಾರು ಅರ್ಜಿಯನ್ನು ದಾಖಲಿಸಿಕೊಂಡಿ ವಿಚಾರಣೆ ನಡೆಸಿ ಭೂ ನ್ಯಾಯ ಮಂಡಳಿ ಆದೇಶದ ವಿರುದ್ಧ ಯಾವುದಾದರೂ ಆದೇಶವಿದೆಯೇ ಎಂಬುದನ್ನು ದೃಢಪಡಿಸಿಕೊಂಡು ನಿಯಮಾನುಸಾರ ಕ್ರಮ ವಹಿಸಲು ನಿರ್ದೇಶನ ನೀಡಿರುತ್ತಾರೆ. ಮಾನ್ಯ ಉಪ ವಿಭಾಗಾಧಿಕಾರಿಗಳು, ದಾವಣಗೆರೆ ಇವರ ನಿರ್ದೇಶನದಂತೆ ದಾಖಲೆಗಳೊಂದಿಗೆ ಖುದ್ದಾಗಿ ಹಾಜರಾಗಲು ಪಕ್ಷಗಾರರಿಗೆ ತಿಳುವಳಿಕೆ ನೋಟೀಸು ನೀಡಿದ್ದು, ಉಭಯತ್ರಯರು ಹಾಜರಾಗಿ ಯಾರೂ ಸಹ ಮೇಲ್ಮನವಿ ದಾಖಲಿಸಿರುವುದರ ಕುರಿತು ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ದಿ.27/12/14 ರಂದು ಭೂ ನ್ಯಾಯ ಮಂಡಳಿ ಆದೇಶ ತಪ್ಪಾಗಿರುವುದರಿಂದ, ಅದನ್ನು ಪ್ರಶ್ನೆ ಮಾಡಲು ಕರ್ನಾಟಕ ಮೇಲ್ಮನವಿ ಪ್ರಾಧಿಕಾರದಲ್ಲಿ ಪ್ರಕರಣ ದಾಖಲು ಮಾಡಿರುವುದರಿಂದ ಅರ್ಜಿದಾರರ ಕೋರಿಕೆಯಂತೆ ಹಕ್ಕು ಬದಲಾವಣೆ ಮಾಡಬಾರದೆಂದು ಲಿಖಿತ ಮನವಿಯನ್ನು ಸಲ್ಲಿಸಿರುತ್ತಾರೆ. ನಂತರ ಪಾಂಡುರಂಗರಾವ್ ಇವರು ದಿ.3/1/15 ರಂದು ಮೃತಪಟ್ಟಿರುವುದರಿಂದ ಅವರ ಜಿ.ಪಿ.ಎ. ಹೋಲ್ಡರ್ ಗೋಪೀನಾಥ್ ಪಿ.ಎಸ್. ಇವರಿಗೆ ಪ್ರಸ್ತುತ ಪ್ರಕರಣದಲ್ಲಿ ಕರ್ನಾಟಕ ಮೇಲ್ಮನವಿ ಪ್ರಾಧಿಕಾರದಲ್ಲಿ ಪ್ರಕರಣ ನಡೆಯುತ್ತಿರುವ ಬಗ್ಗೆ ದಾಖಲೆಗಳನ್ನು ಸಲ್ಲಿಸಲು ದಿ.20/1/15 ರಂದು ತಿಳುವಳಿಕೆ ಪತ್ರ ಕಳುಹಿಸಲಾಗಿರುತ್ತದೆ. ಭೂನ್ಯಾಯ ಮಂಡಳಿಯ ಆದೇಶದ ಪ್ರಕಾರ ಆಗಿರುವ ಮ್ಯುಟೇಷನ್ ಆದೇಶವಾಗಿದ್ದು, ಪಹಣಿ ಇಂಡೀಕರಣ ತಡೆಯಲು ಬರುವುದಿಲ್ಲವೆಂದು ಉಪ ವಿಭಾಗಾಧಿಕಾರಿಗಳು, ದಾವಣಗೆರೆ ಇವರು ನಿರ್ದೇಶನ ನೀಡಿದ ಮೇರೆಗೆ ಪಹಣಿ ಇಂಡೀಕರಣ ಮಾಡುವ ಅಧಿಕಾರ ಮಾನ್ಯ ಉಪ ವಿಭಾಗಾಧಿಕಾರಿಗಳಿಗೆ ಇರುವುದರಿಂದ ಪಹಣಿಯಲ್ಲಿ ಇಂಡೀಕರಣ ಮಾಡುವ ಕುರಿತು ಸ್ಪಷ್ಟ ಆದೇಶವನ್ನು ಕೋರಿ ಪತ್ರ ಬರೆಯಲಾಗಿದ್ದು, ಮಾನ್ಯ ಉಪ ವಿಭಾಗಾಧಿಕಾರಿಗಳು ದಾವಣಗೆರೆ ಇವರ ಕಚೇರಿ ಪತ್ರ ಸಂ.ಆರ್‌ಆರ್‌ಟಿಸಿ.ಆರ್.413/14-15 ದಿ.18/5/15 ರ ಪ್ರಕಾರ ಉಪ ವಿಭಾಗಾಧಿಕಾರಿಗಳು ದಾವಣಗೆರೆ ಇವರ ಕಚೇರಿ ಪತ್ರ ಸಂ.ಎಲ್‌ಆರ್‌ಎಫ್ ಸಿಆರ್ 68/13-14, 69/14-15 ದಿ.23/3/15 ರಂತೆ ತಕರಾರುದಾರರು ಯಾವುದೇ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿರುವ ಬಗ್ಗೆ ದಾಖಲಾತಿಗಳನ್ನು ಹಾಜರು ಪಡಿಸದೇ ಇರುವುದರಿಂದ ಪಹಣಿ ಇಂಡೀಕರಣಕ್ಕೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ. ಆದರೆ, ಪುನಃ ಪಹಣಿ ಇಂಡೀಕರಣಕ್ಕೆ ಆದೇಶ ಕೋರಿರುವುದರಿಂದ ತಮ್ಮ ವರದಿಯನ್ನು ಪರಿಗಣಿಸಿ ಭೂನ್ಯಾಯ ಮಮಡಳಿ ಆದೇಶ ಮತ್ತು ಎಂ.ಆರ್.6/80-81 ರಂತೆ ರಿ.ಸ.ನಂ.25 ರಲ್ಲಿ 1.30 ಎಕರೆ ಜಮೀನಿನ ಪಹಣಿ ಇಂಡೀಕರಣ ಮಾಡಲು ನಿಯಮಾನುಸಾರ

ಕೈಗೊಳ್ಳಲು ಸೂಚಿಸಿರುತ್ತಾರೆ. ಆದರೆ, ಪಾಂಡುರಂಗರಾವ್ ಇವರು ಮೃತಪಟ್ಟ ಕಾರಣ ಅವರ ಮಗನಾದ ಗಿರೀಶ್ ಇವರು ಪವತಿ ಸಬೂಬಿನ ಮೇರೆಗೆ ಖಾತೆ ಬದಲಾವಣೆ ಮಾಡಿಕೊಡಲು ಅರ್ಜಿ ಸಲ್ಲಿಸಿರುತ್ತಾರೆ. ಖಾತೆ ಪಹಣಿ ವರ್ಗಾವಣೆ ಮಾಡಬಾರದೆಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಪ್ರಕರಣ ನಾಡಕಚೇರಿ ನ್ಯಾಮತಿಯಲ್ಲಿ ನಡೆಯುತ್ತಿದೆಯೆಂದು ಹೇಳಿರುತ್ತಾರೆ.

4) 2ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಎಂ.ಆರ್.ನಂ.6/80-81 ರ ಆದೇಶದಂತೆ ಆರ್.ಟಿ.ಸಿ. ಇಂಡೀಕರಣ ಮಾಡುವ ಬಗ್ಗೆ ಮಾನ್ಯ ತಹಶೀಲ್ದಾರ್‌ರವರಿಗೆ ಸಲ್ಲಿಸಿರುವ ಅರ್ಜಿಯ ಬಗ್ಗೆ ಸಕಾಲದಲ್ಲಿ ಅವರ ಮೇಲಿನ ಅಧಿಕಾರಿಯಾಗಿರುವ ರಾಜಸ್ವ ನಿರೀಕ್ಷಕರು, ಬೆಳಗುತ್ತಿ ಹೋಬಳಿ ಇವರಿಗೆ ಸ್ಪಷ್ಟವಾದ ವರದಿಯನ್ನು ಸಲ್ಲಿಸಿರುತ್ತಾರೆಂದು ತಿಳಿಸಿರುತ್ತಾರೆ.

5) ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ದೂರಿನಲ್ಲಿ ಹೇಳಿರುವ ವಿಚಾರಗಳನ್ನು ಪುನರುಚ್ಛರಿಸಿರುತ್ತಾರೆ. ಮುಂದುವರೆದು ಎದುರುದಾರರು ಉದ್ದೇಶಪೂರ್ವಕವಾಗಿ ತಡಮಾಡುತ್ತಿದ್ದಾರೆಂದು ತಿಳಿಸಿರುತ್ತಾರೆ.

6) ದೂರುದಾರರ ದೂರಿನ ವಿಚಾರಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳ ಸಮೇತ ಗೌರವಾನ್ವಿತರ ಮುಂದೆ ಹಾಜರಾಗುವಂತೆ ತಹಶೀಲ್ದಾರ್, ತಾಲ್ಲೂಕು ಕಚೇರಿ ಹೊನ್ನಾಳಿ ಮತ್ತು ಗ್ರಾಮ ಲೆಕ್ಕಾಧಿಕಾರಿ, ನ್ಯಾಮತಿ ಗ್ರಾಮಪಂಚಾಯತ್, ಇವರಿಗೆ ಹಾಗೂ ದೂರುದಾರರಿಗೆ ಆದೇಶಿಸಲಾಗಿತ್ತು. ತಹಶೀಲ್ದಾರ್, ಹೊನ್ನಾಳಿ ತಾಲ್ಲೂಕು ಇವರು ತನ್ನ ಹೇಳಿಕೆಯಲ್ಲಿ ಉಪ ತಹಶೀಲ್ದಾರ್, ನಾಡಕಚೇರಿ, ನ್ಯಾಮತಿ ಇವರ ನ್ಯಾಯಾಲಯದ ಪ್ರಕರಣ ಸಂ.ನಾಕನ್ಯಾ ವಿವಾದ.ಸಿಆರ್.35/2015-16 ದಿ.11/8/15 ರ ಆದೇಶದಲ್ಲಿ ಪ್ರತಿವಾದಿಯಾದ ಶ್ರೀ.ಗಿರೀಶ್ ಪಿ ತಂದೆ ಪಾಂಡುರಂಗರಾವ್, ನ್ಯಾಮತಿ ಇವರು ಮಾನ್ಯ ಉಚ್ಛ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಪಿಟಿಷನ್ ನಂ.30549/15 ದಿ.23/7/2015 ರಂದು ಪ್ರಕರಣವನ್ನು ದಾಖಲಿಸಿರುತ್ತೇನೆಂದು ಅರ್ಜಿ ಮೂಲಕ ಸಂಬಂಧಪಟ್ಟ ರಿಟ್ ಪಿಟಿಷನ್ ಪ್ರತಿಯನ್ನು ಸಲ್ಲಿಸಿರುವುದರಿಂದ, ಹೊನ್ನಾಳಿ ತಾಲ್ಲೂಕು, ಬೆಳಗುತ್ತಿ ಹೋಬಳಿ, ನ್ಯಾಮತಿ ಗ್ರಾಮದ ಸ.ನಂ.25ಪಿ ರಲ್ಲಿ 1.30 ಎಕರೆ ಜಮೀನನ್ನು ಸದರಿ ನ್ಯಾಯಾಲಯದಲ್ಲಿ ವಿಚಾರಣೆ ನಡೆದು ಮೇಲ್ಮನವಿ ಆದೇಶವಾಗುವವರೆಗೂ ಯಥಾಸ್ಥಿತಿ ಕಾಯ್ದಿಡುವಂತೆ ಆದೇಶ ಮಾಡಿರುತ್ತಾರೆ. ಸದರಿ ಆದೇಶದಂತೆ ಖಾತೆ ಪಹಣಿ ಶ್ರೀ.ಪಾಂಡುರಂಗರಾವ್ ಬಿನ್ ವೆಂಕೋಬರಾವ್‌ರವರ ಹೆಸರಿನಲ್ಲಿ ಮುಂದುವರೆಸಲಾಗುತ್ತಿದೆ ಎಂದು ಹೇಳಿಕೆ ನೀಡಿರುತ್ತಾರೆ.

7) ದೂರುದಾರರು ತನ್ನ ದೂರಿನ ಜೊತೆ ಹಾಜರು ಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ. ದೂರುದಾರರ ಹೆಸರಿಗೆ ನ್ಯಾಮತಿ ಗ್ರಾಮದ ಸ.ನಂ.25 ರ 1.30 ಎಕರೆ ಜಮೀನಿನ ವಿಚಾರವಾಗಿ ದಿ.5/4/1980 ರಂದು ಸಾಗುವಳಿ ಚೀಟಿಯನ್ನು ನೀಡಿರುವುದು ಕಂಡುಬರುತ್ತದೆ. ಸದರಿ ಸಾಗುವಳಿ ಚೀಟಿಯ ಆಧಾರದಲ್ಲಿ ಎಂ.ಆರ್.ನಂ.6/80/81 ರಂತೆ ದೂರುದಾರರ ಹೆಸರಿಗೆ ಮ್ಯುಟೇಷನ್ ಆದೇಶ ಆಗಿರುವುದು ಕಂಡುಬರುತ್ತದೆ. ಆದರೆ, ಸದರಿ ಮ್ಯುಟೇಷನ್ ಆದೇಶದ ಆಧಾರದಲ್ಲಿ ಪಹಣಿ ಇಂಡೀಕರಣವಾಗಿರುವುದಿಲ್ಲವೆಂದು ಎದುರುದಾರರು ಒಪ್ಪಿಕೊಂಡಿರುತ್ತಾರೆ. ದೂರುದಾರರು ದಿ.19/10/13 ರಂದು ಪಹಣಿ ಇಂಡೀಕರಿಸಲು ಅರ್ಜಿ ಸಲ್ಲಿಸಿದ್ದರೂ ಸಹ ಪಹಣಿ ಇಂಡೀಕರಿಸದೇ ಇರಲು ಎದುರುದಾರರು ಆಕ್ಷೇಪಣೆಯಲ್ಲಿ ನೀಡಿರುವ ಕಾರಣಗಳು ಸಮಂಜಸವಾಗಿರುವುದಿಲ್ಲ.

8) ದೂರುದಾರರು ತನ್ನ ದೂರಿನ ಜೊತೆ ದಿ.13/11/14 ರಂದು ಉಪ ವಿಭಾಗಾಧಿಕಾರಿಗಳು, ದಾವಣಗೆರೆ ಉಪ ವಿಭಾಗ ಇವರು ತಹಶೀಲ್ದಾರ್, ಹೊನ್ನಾಳಿ ಇವರಿಗೆ ನೀಡಿರುವ ನಿರ್ದೇಶನದಲ್ಲಿ ಭೂನ್ಯಾಯ ಮಂಡಳಿಯಲ್ಲಿ ಆದ ಆದೇಶದ ಪ್ರಕಾರ ಎಂ.ಆರ್.ನಂ.6/1980–81 ರಂತೆ ಅರ್ಜಿದಾರರ ಹೆಸರಿಗೆ ಖಾತಾ ಬದಲಾವಣೆ ಆದೇಶ ಆಗಿರುವುದರಿಂದ, ಶ್ರೀ.ಪಾಂಡುರಂಗರಾವ್ ಇವರು ಸಲ್ಲಿಸಿರುವ ತಕರಾರು ಅರ್ಜಿಯ ಮೇರೆಗೆ ಭೂನ್ಯಾಯ ಮಂಡಲಿ ಆದೇಶದ ಪ್ರಕಾರ ಆಗಿರುವ ಮ್ಯುಟೇಷನ್ ಆದೇಶವಾಗಿದ್ದು, ಪಹಣಿ ಇಂಡೀಕರಣ ತಡೆಹಿಡಿಯಲು ಬರುವುದಿಲ್ಲ. ಆದ್ದರಿಂದ, ಭೂನ್ಯಾಯ ಮಂಡಳಿ ಆದೇಶದ ವಿರುದ್ಧ ಯಾವುದಾದರೂ ಆದೇಶವಿದೆಯೇ ಎಂಬುದನ್ನು ದೃಢಪಡಿಸಿಕೊಂಡು ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿರುವುದು ಕಂಡುಬರುತ್ತದೆ. ಅದೇರೀತಿ ದಿ.6/2/15 ರಂದು ಜಿಲ್ಲಾಧಿಕಾರಿಗಳು, ದಾವಣಗೆರೆ ಇವರ ಕಚೇರಿಯಿಂದ ಅರ್ಜಿದಾರರ ಅರ್ಜಿಯನ್ನು ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಹೇಳಿರುವುದು ಕೂಡ ಕಂಡುಬರುತ್ತದೆ. ದಿ.6/2/16 ರಂದು ಉಪ ವಿಭಾಗಾಧಿಕಾರಿಗಳು, ದಾವಣಗೆರೆ ಉಪ ವಿಭಾಗ ಇವರು ಭೂನ್ಯಾಯ ಮಂಡಳಿ ಆದೇಶದಂತೆ ಖಾತೆ ಪಹಣಿ ಮಾಡುವ ಬಗ್ಗೆ ಪುನಃ ನಿರ್ದೇಶನ ಕೋರಿ ಪದೇಪದೇ ಪ್ರಸ್ತಾವನೆ ಸಲ್ಲಿಸುತ್ತಿರುವುದು ಸಮಂಜಸವಾದ ಕ್ರಮವಲ್ಲ. ಆದ್ದರಿಂದ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ಮಧ್ಯಂತರ/ಪ್ರತಿಬಂಧಕಾಜ್ಞೆ ಆದೇಶವಿರುವ ಬಗ್ಗೆ ಖಚಿತ ಪಡಿಸಿಕೊಂಡು ಕಾನೂನು ಅಭಿಪ್ರಾಯ ಪಡೆದು ನಿಯಮಾನುಸಾರ ಕ್ರಮ ಕೈಗೊಳ್ಳಲು ತಹಶೀಲ್ದಾರ್, ಹೊನ್ನಾಳಿ ತಾಲ್ಲೂಕು ಇವರಿಗೆ ನಿರ್ದೇಶನ ನೀಡಿರುವುದು ಕಂಡುಬರುತ್ತದೆ.

9) ಪಿ.ಗಿರೀಶ್ ಎನ್ನುವವರು ಸಲ್ಲಿಸಿರುವ ರಿಟ್ ಅರ್ಜಿ ಸಂ.30549/2015 ನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ವೆಬ್‌ಸೈಟ್‌ನಲ್ಲಿ ಪರಿಶೀಲಿಸಲಾಗಿ ದಿ.23/7/2015 ರಂದು ಅವರು ಹೂಡಿರುವುದು ಕಂಡುಬರುತ್ತದೆ. ಕಾನೂನು ಸಲಹೆಗಾರರು, ಜಿಲ್ಲಾಧಿಕಾರಿಗಳ ಕಚೇರಿ, ದಾವಣಗೆರೆ ಇವರು ನೀಡಿರುವ ವರದಿಯನ್ನು ಪರಿಶೀಲಿಸಿದಾಗ, ಸದರಿ ಪ್ರಕರಣದಲ್ಲಿ ಯಾವುದೇ ಮಧ್ಯಂತರ ಆದೇಶವಿಲ್ಲವೆಂಬುದು ಕಂಡುಬರುತ್ತದೆ. ಆದ್ದರಿಂದ, ಯಾವುದೇ ಮಧ್ಯಂತರ ಆದೇಶ ಇಲ್ಲದೇ ಇದ್ದ ಪಕ್ಷದಲ್ಲಿ ಕಾನೂನು ಪ್ರಕಾರ ಕ್ರಮವನ್ನು ಕೈಗೊಳ್ಳಲು ತಹಶೀಲ್ದಾರ್‌ರವರಿಗೆ ಯಾವುದೇ ಕಾನೂನಿನ ತೊಡಕು ಇರುವುದಿಲ್ಲ. ದೂರುದಾರರ ಅರ್ಜಿಯ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ದಿ.13/11/14 ರಂದು ಉಪ ವಿಭಾಗಾಧಿಕಾರಿಗಳು ತಹಶೀಲ್ದಾರ್‌ರವರಿಗೆ ನಿರ್ದೇಶನವನ್ನು ನೀಡಿದ್ದರೂ ಸಹ ಸುಮಾರು 8 ತಿಂಗಳಿಗೂ ಹೆಚ್ಚು ಸಮಯ ಎದುರುದಾರರು ಯಾವುದೇ ಕ್ರಮವನ್ನು ಕೈಗೊಳ್ಳದಿರುವುದು ಕಂಡುಬರುತ್ತದೆ. ನಂತರದಲ್ಲಿ ಗಿರೀಶ್ ಎನ್ನುವವರು ರಿಟ್ ಅರ್ಜಿಯನ್ನು ಸಲ್ಲಿಸಿರುತ್ತಾರೆಂದು, ಆ ಆಧಾರದಲ್ಲಿ ಕ್ರಮವನ್ನು ಕೈಗೊಳ್ಳದಿರುವುದು ಕಂಡುಬರುತ್ತದೆ. ದೂರುದಾರರು 2013ನೇ ಸಾಲಿನಲ್ಲೇ ಅರ್ಜಿಯನ್ನು ಸಲ್ಲಿಸಿದ್ದರೂ ಸಹ ಮತ್ತು 2014 ರಲ್ಲಿ ಉಪ ವಿಭಾಗಾಧಿಕಾರಿಗಳು ನಿರ್ದೇಶನವನ್ನು ನೀಡಿದ್ದರೂ ಸಹ ಸೂಕ್ತ ಸಮಯದಲ್ಲಿ ಎದುರುದಾರರು ಯಾವುದೇ ಕ್ರಮವನ್ನು ಕೈಗೊಳ್ಳದಿರುವುದು ಕಂಡುಬರುತ್ತದೆ. ಸದರಿ ಅಂಶವು ಎದುರುದಾರರ ಕರ್ತವ್ಯ ನಿರ್ಲಕ್ಷ್ಯತನವನ್ನು ಎತ್ತಿ ತೋರಿಸುತ್ತದೆ ಮತ್ತು ಮೇಲಾಧಿಕಾರಿಗಳ ನಿರ್ದೇಶನವಿದ್ದರೂ ಸಹ ಗಿರೀಶ್ ಎನ್ನುವವರು ರಿಟ್ ಅರ್ಜಿಯನ್ನು ಸಲ್ಲಿಸುವ ತನಕ ಯಾವುದೇ ಕ್ರಮವನ್ನು ಕೈಗೊಳ್ಳದಿರುವುದು ಎದುರುದಾರರು ಯಾವುದೋ ಆಮಿಷಕ್ಕೆ ಬಲಿಯಾಗಿ ಕ್ರಮ ಕೈಗೊಳ್ಳದಿರುವುದು

ಮತ್ತು ಯಾವುದೇ ಹಿತಾಸಕ್ತಿಯಿಂದ ಕ್ರಮವನ್ನು ಕೈಗೊಳ್ಳಲು ವಿಫಲರಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

10) ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ, ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೆ, ಕರ್ತವ್ಯಲೋಪ ಎಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತಿದ್ದು, ಅವರು ಸಲ್ಲಿಸಿರುವ ಆಕ್ಷೇಪಣೆಯು ಮೇಲಿನ ಆಪಾದನೆಯನ್ನು ಅಲ್ಲಗಳೆಯಲು ಸೂಕ್ತ ಅಥವಾ ಸಮಾಧಾನಕರವಾಗಿರುವುದಿಲ್ಲ ಎಂಬ ಅಭಿಪ್ರಾಯಕ್ಕೆ ಬಂದಿದೆ. ಆ ಕಾರಣದಿಂದಾಗಿ ಎದುರುದಾರರು ಶಿಸ್ತು ಕ್ರಮಕ್ಕೆ ಭಾದ್ಯಸ್ಥರಾಗಿರುತ್ತಾರೆ.

11) ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮ 3(1)(ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿಯಲ್ಲಿ, ಎದುರುದಾರರ ವಿರುದ್ಧ ವಿಚಾರಣೆ ನಡೆಸಲು, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

12) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 27-3-17

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು–2,**
**ಕರ್ನಾಟಕ ರಾಜ್ಯ, ಬೆಂಗಳೂರು.**